**ಸಂಚಾರಿ ಆರಕ್ಷಕ ಠಾಣೆ ಮಂಜೂರು**

**793(1345) ಶ್ರೀಮತಿ ಕಲ್ಪನಾ ಸಿದ್ದರಾಜು:**(ಮದ್ದೂರು) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ಪಟ್ಟಣಕ್ಕೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ, ಸಂಚಾರಿ ಠಾಣೆಯ ಕಟ್ಟಡಕ್ಕೆ ಸ್ಥಳ ಗುರುತಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಪಟ್ಟಣದ ಯಾವ ಭಾಗದಲ್ಲಿ ಸ್ಥಳವನ್ನು ಗುರುತಿಸಲಾದ ಮತ್ತು ಎಷ್ಟು ವಿಸ್ತೀರ್ಣದ ಸ್ಥಳವನ್ನು ಗುರುತಿಸಲಾಗಿದೆ?

ಈ) ಹಾಗಿದ್ದಲ್ಲಿ, ಎಂದಿನಿಂದ ಸಂಚಾರಿ ಠಾಣೆಯನ್ನು ಪ್ರಾರಂಭಿಸಲಾಗುವುದು.

ಉ) ಮದ್ದೂರಿನ ಸಂಚಾರಿ ಆರಕ್ಷಕ ಠಾಣೆಗೆ ಮಂಜುರಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

**ಶ್ರೀ ಡಾ. ವಿ ಎಸ್ ಆಚಾರ್ಯ(ಗೃಹ ಸಚಿವರು)**

ಅ) ಹೌದು, ಸರ್ಕಾರದ ಆದೇಶ ಸಂ,ಹೆಚ್‌ಡಿ/207/ಪಿಒಪಿ/2008 ದಿನಾಂಕ 10/02/2010ರಲ್ಲಿ ಮದ್ದೂರು ಪಟ್ಟಣಕ್ಕೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾಗಿದೆ

ಆ) ಹೌದು.

ಇ) ಮದ್ದೂರು ನಗರದಲ್ಲಿ ಹಾದು ಹೋಗಿರುವ ಬೆಂಗಳೂರು ಮೈಸೂರು ಹೆದ್ದಾರಿ ಹತ್ತಿರದಲ್ಲಿರುವ ಮದ್ದೂರು ಪಟ್ಟಣದ ನ್ಯಾಯಾಲಯದ ಸಂಕೀರ್ಣದ ಪಕ್ಕದಲ್ಲಿನ ಸ.ನಂ. 819/1 ರಲ್ಲಿ ಜಾಗ ಗುರುತಿಸಲಾಗಿದೆ.

ಈ) 2010ರ ಜುಲೈ ತಿಂಗಳ ಮೂರನೇ ವಾರದಲ್ಲಿ ಮದ್ದೂರು ಸಂಚಾರಿ ಠಾಣೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಉ) ಮದ್ದೂರು ಸಂಚಾರಿ ಪೊಲೀಸ್ ಠಾಣೆಗೆ ಒಟ್ಟು 34 ಸಿಬ್ಬಂದಿಗಳ ಮಂಜೂರಾಗಿದ್ದು, ಅವುಗಳು,

1–ಪಿಎಸ್‌ಐ, 2–ಎಎಸ್‌ಐ, 8–ಸಿಹೆಚ್‌ಸಿ, 21–ಸಿಪಿಸಿ, 1–ಎಪಿಸಿ ಮತ್ತು 1–ಸ್ವೀಪರ್.